ಇ) ಹೆಚ್ಚು ಹೆಚ್ಚು ಕೃತಕ ಮರು ಪೂರೈಕೆ ರಚನೆಗಳ ನಿರ್ಮಾಣ ಹಾಗೂ ವಿಧೇಯಕವನ್ನು ಜಾರಿಗೆ ತರುವ ಮುಖೇನ ಹೆಚ್ಚು ಅಂತರ್ಜಲ ಬಳಕೆಯ ನಿಯಂತ್ರಣ, ಇವುಗಳು ಪ್ರಮುಖ ಪರಿಹಾರ ಕ್ರಮಗಳಾಗಿದೆ.

ಬಸವನ ಬಾಗೇವಾಡಿಯಲ್ಲಿ ಸಮುದಾಯ ಭವನಗಳು

1065(1264) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಸವನ ಬಾಗೇವಾಡಿ ಕ್ಷೇತ್ರದಲ್ಲಿ ಮಂಜೂರು ಮಾಡಲಾದ ಸಮುದಾಯಭವನಗಳ ಸಂಖ್ಯೆ ಎಷ್ಟು;

ಆ) ಸದರಿ ಸಮುದಾಯ ಭವನಗಳನ್ನು ಮಂಜೂರು ಮಾಡಲು ಅನುಸರಿಸಿದ ಮಾನದಂಡವೇನು;

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು)

ಅ) ಮೂರು

ಆ) ಬಸವನ ಬಾಗೇವಾಡಿ ಪಟ್ಟಣ ಪಂಚಾಯಿತಿ ಕರಾವು ಪಾಸು ಮಾಡಿ ಕಳುಹಿಸಿದ ಪ್ರಕಾರ ಮಂಜೂರು ಮಾಡಲಾಗಿದೆ. ಬಸವನ ಬಾಗೇವಾಡಿ ಪಟ್ಟಣಕ್ಕೆ ಸನ್ 1999-2000ನೇ ಸಾಲಿನಲ್ಲಿ ಪಟ್ಟಣ ಪಂಚಾಯತಿಯ ಶೇ. 18ರ ಅನುದಾನದಲ್ಲಿ ಮಾತ್ರ ವಡ್ಡರ ಸಮಾಜದವರ ಸಲುವಾಗಿ ರೂ. 1,40,000-00ಗಳ ಅಂದಾಜಿನ ಒಂದು ಸಮಾಜ ಮಂದಿರವನ್ನು ಮಂಜೂರು ಮಾಡಲಾಗಿದೆ. ಸದರಿ ಕೆಲಸಪ್ರಗತಿಯಲ್ಲಿದೆ. ಅದಲ್ಲದೇ 1998-99ನೇ ಸಾಲಿನಲಿ ಬಸವನ ಬಾಗೇವಾಡಿ ವಾರ್ಡ್ ನಂ.4ರಲ್ಲಿ ಬಸವನ ನಗರದಲ್ಲಿ ಹರಿಜನರಿಗಾಗಿ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಒಂದು ಸಮುದಾಯ ಭವನ ಮತ್ತು ಮಾದರ ಗಲ್ಲಿಯಲ್ಲಿ ಪಟ್ಟಣ ಪಂಚಾಯಿತಿಯು ಪ್ರತಿಶತ 18ರ ನುದಾನದಲ್ಲಿ ಒಂದು ಡಾ: ಅಂಬೇಡ್ಕರ್ ಭವನವನ್ನು ಮಂಜೂರುಮಾಡಲಾಗಿದೆ.

ಧಾರವಾಡ - ಹುಬ್ಬಳ್ಳಿಯಲ್ಲಿ ಕುಡಿಯುವ ನೀರಿನ ಸಮಸ್ಯೆ

1070 (1242) ಶ್ರೀ ಬೆಲ್ಲದ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ಧಾರವಾಡ - ಹುಬ್ಬಳ್ಳಿ ಕುಡಿಯುವ ನೀರಿನ ಸಮಸ್ಯೆ ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಮಹಾನಗರದ ಕುಡಿಯುವ ನೀರಿನ ಸಮಸ್ಯೆ ಎಷ್ಟು ವರ್ಷಗಳಿಂದ ಇದೆ ಹಾಗೂ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ತೆಗೆದುಕೊಂಡಿರುವ ಶಾಶ್ವತ ಕ್ರಮಗಳು ಯಾವುವು?

3. ಮಹಾನಗರದ ನೀರು ಸರಬರಾಜು (ವಿತರಣೆ) ವ್ಯವಸ್ಥೆಯ ಇಂಜಿನಿಯರು, ದೋಷದಿಂದ ಸರಿಯಾದ ಪ್ರಮಾಣದಲ್ಲಿ ನೀರನ್ನು ಜನತೆಗೆ ಪೂರೈಸುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

4. ಸರ್ಕಾರದ ಶಾಶ್ವತವಾದ ಕುಡಿಯುವ ನೀರಿಗಾಗಿ ಯಾವ ಕ್ರಮ ತೆಗೆದುಕೊಳ್ಳುವ ಯೋಜನೆ ಇದೆ ಹಾಗೂ ಎರಡನೇ ಮೂರನೇ ಹಂತದ ಯೋಜನೆ ಎಂದು ಪ್ರಾರಂಭಿಸಲಾಗುವುದು?